ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ,ತರೀಕೆರೆ

ಸಿ.ಸಿ.ನಂಃ 1865/2023

ಫಿರ್ಯಾದುದಾರರುಃ ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

ಃವಿರುದ್ಧ ಃ

ಆರೋಪಿಃ 1. ಶ್ರೀ ಜಗದೀಶ
ಯಾನೆ ಪರಮೇಶ್ವರಪ್ಪ,
ಬಿನ್ ಚಂದ್ರಪ್ಪ,
62 ವರ್ಷ,
2. ಶ್ರೀ ತೀರ್ಥಪ್ರಸಾದ್,
ಬಿನ್ ಚಂದ್ರಪ್ಪ,
55 ವರ್ಷ,
3. ಶ್ರೀಮತಿ ಕಾವ್ಯ,
ಕೋಂ ಮಂಜಪ್ಪ,
28 ವರ್ಷ,
4. ಶ್ರೀಮತಿ ಶೀಲಾ,
ಕೋಂ ತೀರ್ಥಪ್ರಸಾದ್,
35 ವರ್ಷ,
5. ಶ್ರೀಮತಿ ಪಾರ್ವತಮ್ಮ,
ಕೋಂ ಜಗದೀಶ,
54 ವರ್ಷ,
6. ಶ್ರೀಮತಿ ಕವಿತಾ,
ಕೋಂ ಕರುಣಾಕರ,
30 ವರ್ಷ,
7. ಶ್ರೀಮತಿ ಭಾಗ್ಯ,
ಕೋಂ ರಾಜಶೇಖರ್,
48 ವರ್ಷ,

ಎಲ್ಲರ ವಾಸಃ ಕಲ್ಲೇನಹಳ್ಳಿ ಗ್ರಾಮ,
ಅಜ್ಜಂಪುರ ತಾಲ್ಲೂಕು.

## ದೋಷಾರೋಪಣೆ

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕರೆ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 08.08.2023 ರಂದು ಬೆಳಿಗ್ಗೆ ಸುಮಾರು 8.00 ಗಂಟೆಗೆ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಕಲ್ಲೇನಹಳ್ಳಿ ಗ್ರಾಮದ ಸರ್ವೇ ನಂಬರ್ 19/1 ರ ತೆಂಗಿನ ತೋಟಕ್ಕೆ ಚಾಸಾ–1/ ಶ್ರೀ ಕಂಭೇಶ ರವರ ತಾಯಿ ಚಾಸಾ–2/ ಶ್ರೀಮತಿ ಕುಮಾರಮ್ಮ ರವರು ಹೋಗಿ ಚಾಸಾ–1 ರವರಿಗೆ ಕರೆ ಮಾಡಿ ನಿಮ್ಮಲ್ಲಿ 1 ಮತ್ತು 2 ಆರೋಪಿತರು ತೋಟಕ್ಕೆ ಕಾಯಿ ಕೆಡವಲು ಬಂದಿರುತ್ತಾರೆ ಬಾ ಎಂದು ಕರೆದಿದ್ದು, ಚಾಸಾ–1 ರವರು ತಕ್ಷಣ ತೋಟಕ್ಕೆ ಹೋಗಿ ನಿಮ್ಮಲ್ಲಿ 1 ಮತ್ತು 2 ನೇ ಆರೋಪಿತರಿಗೆ ಚಾಸಾ–1 ರವರು ಏಕೆ ನಮ್ಮ ತೋಟದಲ್ಲಿ ಕಾಯಿ ಕೆಡವುತ್ತಿರಾ, ನಮ್ಮ ತಾಯಿ ಹೇಳಿದ್ದು ನಿಮಗೆ ತಿಳಿಯಲಿಲ್ಲವೇ, ಎಂದು ಹೇಳುತ್ತಿರುವಾಗ 1 ರಿಂದ 7 ನೇ ಆರೋಪಿತರಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಗುಂಪು ಕಟ್ಟಿಕೊಂಡು ಬಂದು ದೊಂಬಿ ನಡೆಸಿರುತ್ತೀರಿ, ಈ ರೀತ್ಯ 1 ರಿಂದ 7 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 147 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 7 ನೇ ಆರೋಪಿತರಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು ಅಕ್ರಮ ಗುಂಪನ್ನು ಕಟ್ಟಿಕೊಂಡು ಬಂದು ದೊಂಬಿ ಮಾಡಿರುತ್ತೀರಿ ರೀತ್ಯ 1 ರಿಂದ 7 ನೇ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 143 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 7 ನೇ ಆರೋಪಿತರಾದ ನೀವುಗಳು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು ಅಕ್ರಮ ಗುಂಪನ್ನು ಕಟ್ಟಿಕೊಂಡು ಬಂದು ಕೈಯಲ್ಲಿ ಮಾರಕ ಆಯುಧಗಳನ್ನು ಹೊಂದಿ ದೊಂಬಿ ಮಾಡಿರುತ್ತೀರಿ. ರೀತ್ಯ 1 ರಿಂದ 7 ನೇ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 144 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 7 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, 1 ರಿಂದ 7 ನೇ ಆರೋಪಿತರಾದ ನೀವು ಚಾಸಾ-1 ಮತ್ತು 2 ರವರನ್ನು ಉದ್ದೇಶಿಸಿ ಇವರದು ಏನು ಹೇಳುತ್ತಿರುತ್ತೀರಾ, ಕಾಯಿ ಕೆಡವಿರಿ ಎಂದು ಬೈಯುತ್ತಾ, ಚಾಸಾ-1 ಮತ್ತು 2 ರವರಿಗೆ ಬಾಯಿಗೆ ಬಂದ ಹಾಗೆ ಬೈದು, ಕಾಯಿ ಕೆಡವಲು ಬಂದಿದ್ದು, ಆಗ ಚಾಸಾ-1 ರವರು ಈ ತೋಟವನ್ನು ನನ್ನ ಅಜ್ಜನನ್ನು ಸಾಕಿದ್ದ ನನಗೆ ಮತ್ತು ನನ್ನ ತಾಯಿಯ ಹೆಸರಿಗೆ ಕಲ್ಲೇನಹಳ್ಳಿ ಗ್ರಾಮದ ಸರ್ವೇ ನಂಬರ್ 19/1 ಮತ್ತು 19/2 ರಲ್ಲಿ ಎರಡೂವರೆ ಎಕರೆ ತೆಂಗು ಮತ್ತು ಅಡಿಕೆ ತೋಟವನ್ನು ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ಹೇಳಿ ಚಾಸಾ-1 ಮತ್ತು 2 ರವರು ಕಾಯಿ ಕೆಡವುದನ್ನು ತಡೆಯಲು ಹೋದಾಗ 1 ರಿಂದ 7 ನೇ ಆರೋಪಿತರಾದ ನೀವುಗಳೆಲ್ಲರೂ ಚಾಸಾ-1 ಮತ್ತು 2 ರವರ ಶಾಂತಿಭಂಗ ಮಾಡುವ ಉದ್ದೇಶದಿಂದ ಬಾಯಿಗೆ ಬಂದ ಹಾಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸಿರುತ್ತೀರಿ. ಈ ರೀತ್ಯ 1 ರಿಂದ 7 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರಂತೆ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಐದನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 7 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ನಿಮ್ಮಲ್ಲಿ 1 ನೇ ಆರೋಪಿ ಚಾಸಾ-2 ರವರ ಮಾನಕ್ಕೆ ಭಂಗ ಬರುವಂತೆ ಅವರ ನೈಟಿಯನ್ನು ಹಿಡಿದು ಎಳೆದಾಡಿರುತ್ತೀರಿ. ಈ ರೀತ್ಯ 1 ರಿಂದ 7 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 354 ಸಹವಾಚಕ ಕಲಂ 149 ರಂತೆ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಆರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 7 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ನಿಮ್ಮಲ್ಲಿ 2 ನೇ ಆರೋಪಿ ಕೈಯಲ್ಲಿದ್ದ ಎಡಮಟ್ಟೆಯಿಂದ ಚಾಸಾ-2 ರವರ ಬಲಕೈಗೆ ಹೊಡೆದು ಬಲಗೈನ ಕಿರುಬೆರಳ ಮೊಳೆಯನ್ನು ಮುರಿದಿರುತ್ತೀರಿ ಮತ್ತು ಅವರಿಗೆ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯ 1 ರಿಂದ 7 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 326 ಸಹವಾಚಕ ಕಲಂ 149 ರಂತೆ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಏಳನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 7 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ನಿಮ್ಮಲ್ಲಿ 3 ರಿಂದ 5 ನೇ ಆರೋಪಿತರು ಚಾಸಾ-2 ರವರನ್ನು ದೂಡಿ ಅವರ ಬೆನ್ನಿಗೆ, ತೊಡೆಗೆ ಮತ್ತು ತಲೆಗೆ ಪೆಟ್ಟುಮಾಡಿರುತ್ತೀರಿ ಮತ್ತು ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯ 1 ರಿಂದ 7 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ

ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಎಂಟನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 7 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ನಿಮ್ಮಲ್ಲಿ 2 ನೇ ಆರೋಪಿ ಯಡಮಟ್ಟೆಯಿಂದ ಚಾಸಾ–1 ರವರ ಎಡಕೈ, ಬೆನ್ನಿಗೆ ಮತ್ತು ಕುತ್ತಿಗೆಗೆ, ನಿಮ್ಮಲ್ಲಿ 1 ನೇ ಆರೋಪಿ ಕಬ್ಬಿಣದ ಹಿಡಿಯಿಂದ ಚಾಸಾ–1 ರವರ ಬಲ ಮುಂಗೈಗೆ ಹಾಗೂ ನಿಮ್ಮಲ್ಲಿ 3 ನೇ ಆರೋಪಿ ಕಲ್ಲಿನಿಂದ ಚಾಸಾ–1 ರವರ ತಲೆಯ ಹಿಂಭಾಗಕ್ಕೆ ಹೊಡೆದಿರುತ್ತೀರಿ ಮತ್ತು ಅವರಿಗೆ ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯ 1 ರಿಂದ 7 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ 1 ರಿಂದ 7 ನೇ ಆರೋಪಿತರಾದ ನೀವು ಅಪರಾದ ಮಾಡುವ ಏಕೋದ್ದೇಶದಿಂದ ಮುಂದುವರಿದು, ಆರೋಪಿಗಳಾದ ನೀವು ಚಾಸಾ–1 ಮತ್ತು 2 ರವರಿಗೆ ಕೊಲೆಬೆದರಿಕೆ ಹಾಕಿರುತ್ತೀರಿ. ಈ ರೀತ್ಯ 1 ರಿಂದ 7 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ರಂತೆ ದಂಢೀಸಲ್ಪಡುವ ಶಿಕ್ಷಾರ್ಹ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ.

ಸದರಿ ಮೇಲ್ಕಂಡ 1 ನೇ ರಿಂದ 7 ನೇ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮೇಲೆ ಹೇಳಿದ ಅಪರಾದಗಳನ್ನು ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆ ಆಗತಕ್ಕದ್ದೆಂದು ಆದೇಶಿಸಲಾಗಿದೆ.

ಪ್ರಶ್ನೆಃ 1 : ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದಿರಾ? ಅವುಗಳು ನಿಮಗೆ ಅರ್ಥವಾಯಿತೇ?

ಉತ್ತರಃ : ಆರೋಪಿಃ1. Yes
ಆರೋಪಿಃ2. Yes
ಆರೋಪಿಃ3. Yes
ಆರೋಪಿಃ4. Yes
ಆರೋಪಿಃ5. Yes
ಆರೋಪಿಃ6. Yes
ಆರೋಪಿಃ7. Yes

ಪ್ರಶ್ನೆ: 2 : ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ : ಆರೋಪಿ:1. Pleaded not guilty and claimed to be tried
ಆರೋಪಿ:2. Pleaded not guilty and claimed to be tried
ಆರೋಪಿ:3. Pleaded not guilty and claimed to be tried
ಆರೋಪಿ:4. Pleaded not guilty and claimed to be tried
ಆರೋಪಿ:5. Pleaded not guilty and claimed to be tried
ಆರೋಪಿ:6. Pleaded not guilty and claimed to be tried
ಆರೋಪಿ:7. Pleaded not guilty and claimed to be tried

(ಆರೋಪಿಗಳಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣಿಕರಿಸುತ್ತೇನೆ)

ದಿನಾಂಕ: 16.01.2025.

ಸಹಿ/-
(ರಾಹುಲ್ ಶೆಟ್ಟಿಗಾರ್)
ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾದಂ., ತರೀಕರೆ

ಆರೋಪಿಗಳ ಸಹಿ:

ಆರೋಪಿ ಸಂ: 1. ........................................

ಆರೋಪಿ ಸಂ: 2........................................

ಆರೋಪಿ ಸಂ: 3........................................

ಆರೋಪಿ ಸಂ: 4........................................

ಆರೋಪಿ ಸಂ: 5........................................

ಆರೋಪಿ ಸಂ: 6........................................

ಆರೋಪಿ ಸಂ: 7........................................